International Journal of Kannada Research
www.kannadajournal.com

ISSN: 2454–5813
IJKR 2019; 5(4): 141-145
© 2019 IJKR
www.kannadajournal.com
Received: 10-08-2019
Accepted: 12-09-2019

**ರಾಜು ಕೂಡಗಿ**
ಸಂಶೋಧನ ವಿದ್ಯಾರ್ಥಿ
ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**Corresponding Author:**
**ರಾಜು ಕೂಡಗಿ**
ಸಂಶೋಧನ ವಿದ್ಯಾರ್ಥಿ
ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# ಪಾಟೀಲ ಪುಟಪ್ಪನವರ ಪ್ರಕಾರ ಮಾನವನಿಗೆ ಇರಬಾರದ ಕೆಟ್ಟ ಗುಣಸ್ವಭಾವಗಳು

**ರಾಜು ಕೂಡಗಿ**

ಪಾಟೀಲ ಪುಟ್ಟಪ್ಪನವರು ಮಾನವರಿಗಿರಬೇಕಾದ ಒಳ್ಳೆಯ ಗುಣಗಳನ್ನು ಹೇಳುವಂತೆ ಕೆಟ್ಟಗುಣಗಳನ್ನು ಗುರುತಿಸುತ್ತಾರೆ. ಇಂಥ ಗುಣಗಳು ಇರುವ ಮನುಷ್ಯ ತಾನು ಉದ್ಧಾರವಾಗುವುದಿಲ್ಲ; ಬೇರೆಯವರನ್ನು ಉದ್ಧಾರವಾಗಲು ಬಿಡುವುದಿಲ್ಲ ಎಂಬುದನ್ನು ಅವರು ಒತ್ತಿ ಒತ್ತಿ ಹೇಳುತ್ತಾರೆ.

**ಆಲಸ್ಯ:** ಆಲಸ್ಯ ಎಂದರೆ ಕನ್ನಡ ನಿಘಂಟಿನಲ್ಲಿ ಸೋಮಾರಿತನ, ಬೇಸರ, ಜಡತ್ವ ಎಂಬಿತ್ಯಾದಿ ಅರ್ಥಗಳಿವೆ. ಪುಟ್ಟಪ್ಪನವರು ಸೋಮಾರಿತನ ಎಂಬುದನ್ನು 'ಆಲಸ್ಯ' ಎಂಬುದಾಗಿ ಹೇಳುತ್ತಾರೆ. ಮೊದಲು ಮನುಷ್ಯ ತನ್ನ ಜೀವನದಲ್ಲಿ ಕಾಳಜಿಯುಳ್ಳವನಾಗಿರಬೇಕು. ಬದಲಾಗಿ ಆಲಸ್ಯ ಹಾಗೂ ನಿಷ್ಕಾಳಜಿಯಿಂದ ಕೂಡಿದವನಾಗಿದ್ದರೆ ಎಲ್ಲ ಬಗೆಯ ಅನರ್ಥಗಳಿಗೂ ಕಾರಣವಾಗಬೇಕಾಗುತ್ತದೆ. ನಿಷ್ಕಾಳಜಿಯೂ ನಿಷ್ಕ್ರೀಯೆಯನ್ನು ಸೃಷ್ಟಿಸುತ್ತದೆ. ನಿಷ್ಕ್ರಿಯೆಯನ್ನು ಸೃಷ್ಟಿಸುತ್ತದೆ. ನಿಷ್ಕ್ರಿಯೆಯು ಆಲಸ್ಯತನಕ್ಕೆ ಕೊಂಡೊಯ್ಯುತ್ತದೆ. ಆಲಸ್ಯವೂ ಮಾನವನು ಎದುರಿಸುವ ಎಲ್ಲ ಅರಿಷ್ಟಗಳಿಗೂ ಕಾರಣವಾಗುತ್ತದೆ ಎಂಬುದನ್ನು ತಿಳಿಸುತ್ತಾರೆ. ಆದ್ದರಿಂದಲೆ ಪುಟ್ಟಪ್ಪನವರು ಆಲಸ್ಯವು 'ಒಂದು ಮಹಾ ಪಾಪ, ಜೀವನಕ್ಕೆ ಹತ್ತಿದ ಜಂಗು'[೧] ಎನ್ನುತ್ತಾರೆ. ಮನುಷ್ಯನನ್ನು ಶಿಕ್ಷಿಸುವುದಾದರೆ ಆತನನ್ನು ಆಲಸಿಯಾಗಿಸಿದರೆ ಸಾಕು ಎನ್ನುವರು. ಇಂಥವರ ಜೀವನದಲ್ಲಿ ಯಾವುದೇ ಆನಂದವೂ ಇರದೆ ಜೀವನವೇ ಅವನಿಗೆ ಭಾರವೆನಿಸುತ್ತದೆ. ಅಲ್ಲದೆ ಇವರು ತನ್ನ ಕುಟುಂಬಕ್ಕಷ್ಟೇ ಅಲ್ಲ ಸಮಾಜ, ದೇಶಕ್ಕೆ ಹೊರೆ ಎನಿಸಿಕೊಳ್ಳುತ್ತದೆ ಎಂದು ದಾಖಲಿಸುತ್ತಾರೆ. ಇಂಥವರಿಗೆ ಜೀವನದಲ್ಲಿ ಎಲ್ಲಿಯೂ ತಂಗುದಾಣವಿರುವುದಿಲ್ಲ. ಇದರಿಂದ ಮಾನವರ ಗುಣದಲ್ಲಿ ಆಲಸ್ಯವು ಅತ್ಯಂತ ಕೆಟ್ಟದ್ದಾಗಿದೆ. ಆದ್ದರಿಂದ ಮಾನವರಲ್ಲಿ ಈ ಗುಣವಿರದಂತೆ ನೋಡಿಕೊಳ್ಳದೆ ಇರುವುದು ಒಳ್ಳೆಯದು.
ಪುಟ್ಟಪ್ಪನವರು ಮತ್ತೊಂದು ಲೇಖನದಲ್ಲಿ ಆಲಸ್ಯತನದ ಕುರಿತು ಹೇಳುತ್ತ ; ಆಲಸ್ಯತನದಂಥ ವಿಷ ಮತ್ತೊಂದಿಲ್ಲ ಅದು, ಲಕ್ವಾ ಹೊಡೆದಂತೆ ಮನುಷ್ಯನನ್ನು ನಿಷ್ಕ್ರಿಯೆಗೊಳಿಸುತ್ತದೆ"[೨] ಎಂದಿದ್ದಾರೆ. ಆದ್ದರಿಂದ ವ್ಯಕ್ತಿಯು ಇಂತಹ ಆಲಸ್ಯತನದಿಂದ ದೂರವಿರಬೇಕಾಗುತ್ತದೆ. ಅದಕ್ಕಾಗಿ ಅವನು ಯಾವುದಾದರೂ ಒಂದು ಚಟುವಟಿಕೆಯಲ್ಲಿ ತೊಡಗಿಕೊಂಡಿರಬೇಕಾದ್ದು ಅವಶ್ಯಕವಾಗಿರುತ್ತದೆ.

**ಭಯ:** ಮಾನವರು ಎಂದೋ ಬರುವ ತೊಂದರೆಗಳನ್ನು ನೆನೆದು ದುಃಖಿಸುವುದು ಸಹಜ. ಅದು ಬರುವ ಮೊದಲೇ ಭಯಭೀತನಾಗಿ ಜೀವನದ ಸುಖವಾದ ಕ್ಷಣಗಳನ್ನು ಕಳೆದುಕೊಳ್ಳುತ್ತಾನೆ. ಅದಕ್ಕಿಂತ ಹುಚ್ಚಾಟ ಮತ್ತೊಂದಿರುವುದಿಲ್ಲ. ಬರುವ ದುಃಖ ತೊಂದರೆಗಳ ಕುರಿತು ಚಿಂತಿಸದೆ ಪ್ರಸ್ತುತವಾಗಿರುವ ಜೀವನವನ್ನು ಸವಿಯಬೇಕು. ಭಯತುಂಬಿಕೊಂಡು ಬದುಕಿನಿಂದ ಏನನ್ನು ಮಾಡಲು ಸಾಧ್ಯವಿಲ್ಲ. ಆದ್ದರಿಂದ ಜೀವನದಲ್ಲಿ ಹೆದರದೆ ಮುಂದೆ ಸಾಗಲೆಬೇಕು. ಭಯವನ್ನು ಹೆಡಮುರಿಕಟ್ಟಿ ಭಾರವಾದ ಕಲ್ಲಿನೊಂದಿಗೆ ಸಾಗರದ ಆಳಕ್ಕೆ ತಳ್ಳಿಬಿಡಬೇಕು. ಆತ್ಮ ಸಂತೋಷದ ಕೆಲಸ ಮಾಡುವವನಿಗೆ ಭಯವೇ ಇರುವುದಿಲ್ಲ ಎನ್ನುತ್ತಾರೆ. ಹಾಗಾಗಿ ಮನುಷ್ಯನಿಗೆ ತಾನು ಮಾಡುವ ಕೆಟ್ಟ ಕೆಲಸದ ಬಗೆಗೆ ಭಯವಿರಬೇಕಾಗುತ್ತದೆ ಹೊರತು ಒಳ್ಳೆಯ ಕೆಲಸ ಮಾಡುವಾಗ ಭಯವಿರಬಾರದು ಎನ್ನುವುದನ್ನು ನೋಡಿದರೆ ಅದು ಸತ್ಯವೆನಿಸುತ್ತದೆ.

**ಜಡತ್ವ:** ಮನುಷ್ಯನ ಜೀವನದಲ್ಲಿ ಚೈತನ್ಯವು ಮುಖ್ಯವಾದುದು. ಚೈತನ್ಯವೇ ಜೀವನ. ಆತನಲ್ಲಿ ಜಡತ್ವವೇ

ನಮ್ಮ ಜೀವನದಲ್ಲಿ ಚೈತನ್ಯವೇ ಇಲ್ಲದಂತಾಗುತ್ತದೆ. ಅದು ಆತನನ್ನು ಕೊಂದುಹಾಕುತ್ತದೆ. ಜೀವನದಲ್ಲಿ ಲವಲವಿಕೆಯನ್ನೇ ಕಿತ್ತುಕೊಳ್ಳುತ್ತದೆ. ಹಾಗಾಗಿ ನಮ್ಮಲ್ಲಿರುವ ಚೈತನ್ಯದ ಬಗೆಗೆ ನಂಬುಗೆಯು ನಮ್ಮನ್ನು ಗೆಲ್ಲಿಸುತ್ತದೆ. ಆದ್ದರಿಂದ ಮಾನವರು ಜಡತ್ವದಿಂದ ದೂರ ಬರಬೇಕಾಗುತ್ತದೆ.

**ಸುಳ್ಳು:** ಸುಳ್ಳು ಮಾನವನ ಜೀವನವನ್ನೆ ಹಾಳು ಮಾಡುತ್ತದೆ. ಅದೇ ಒಂದು ಸತ್ಯ ವ್ಯಕ್ತಿಯ ಜೀವನವನ್ನೇ ಬೆಳಗುತ್ತದೆ. ಇದಕ್ಕೆ ಯಾರ ಹಂಗಿಲ್ಲವಾಗುತ್ತದೆ. ಅದೇ ಸುಳ್ಳಿಗೆ ಹಂಗಿರುತ್ತದೆ. ಒಂದು ಸುಳ್ಳನ್ನು ಮುಚ್ಚಿಡುವುದಕ್ಕಾಗಿ ಮತ್ತೊಂದು ಸುಳ್ಳನ್ನು ಹೆಣೆಯಬೇಕಾಗುತ್ತದೆ. ಸುಳ್ಳಿನಂಥ ನಿಕೃಷ್ಟವಾದ ಪಾಪ ಮತ್ತೊಂದಿರುವುದಿಲ್ಲ. ಹೀಗಾಗಿ ಒಂದು ಅರ್ಧಮರ್ಧ ಸತ್ಯ ಹೇಳುವುದು ಒಂದೇ, ಸುಳ್ಳು ಹೇಳುವುದು ಸಹಿತ ನರಕದ ಹಾದಿಯಿರುತ್ತದೆ. ವ್ಯಕ್ತಿಯನ್ನು ಕೊಲ್ಲುವುದಕ್ಕೆ ಬೇರೆ ವೈರಿ ಬೇಕಾಗಿಲ್ಲ. ಅದಕ್ಕೆ ನಾವು ಹೇಳುವ ಸುಳ್ಳೊಂದೆ ಸಾಕಾಗುತ್ತದೆ ಎನ್ನುತ್ತಾರೆ.

**ದುರ್ದೈವ:** ದುರ್ದೈವ ಎಂಬುದು ಮಾನವನ ಅಜ್ಞಾನದಲ್ಲಿ ಅಡಗಿರುತ್ತದೆ. ಅಜ್ಞಾನ ಹೋಗದ ಹೊರತು ದುರ್ದೈವವು ಹೋಗುವುದಿಲ್ಲ. ಮನುಷ್ಯನು ಮೇಲಕ್ಕೆ ಏರಬೇಕೆಂದರೆ ಅವನಿಗೆ ಜ್ಞಾನ ಬೇಕೆ ಬೇಕು. ಜ್ಞಾನವುಳ್ಳ ವ್ಯಕ್ತಿ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು. ಇದನ್ನು ತಿಳಿದುಕೊಂಡು ವ್ಯಕ್ತಿಯೂ ಜ್ಞಾನದಾಹವನ್ನು ಹೆಚ್ಚಿಸಿಕೊಳ್ಳಬೇಕು. ಅದನ್ನು ಪಡೆಯಲು ಎಂದಿಗೂ ಆತನು ನಾಚಿಕೆ ಪಟ್ಟುಕೊಳ್ಳಬಾರದು. ಜ್ಞಾನವೆಂಬ ದುರಹಂಕಾರದಿಂದ ಅಜ್ಞಾನವೆಸಗುತ್ತಾನೆ. ಜ್ಞಾನದ ಅಹಂಕಾರವನ್ನು ಎಲ್ಲದಕ್ಕೂ ಕೆಟ್ಟದ್ದು. ಒಂದು ವಿಷಯ ಹಾಗೂ ವ್ಯಕ್ತಿಗಳ ಬಗೆಗೆ ಸರಿಯಾಗಿ ತಿಳಿದುಕೊಳ್ಳದೆ ಎಸಗಿದ ತಪ್ಪಿನಿಂದ ಅಜ್ಞಾನವೇ ಆಗಿರುತ್ತದೆ ಎಂದು ಹೇಳುತ್ತಾರೆ.

**ಕೃತಜ್ಞತೆ ಇಲ್ಲದಿರುವಿಕೆ:** ವ್ಯಕ್ತಿಗಳ ಜೀವನದಲ್ಲಿ ಕೃತಜ್ಞತೆಯೆಂಬುದು ಒಂದು ದೊಡ್ಡ ದೈವೀ ಗುಣವಾಗಿರುತ್ತದೆ. ಮನುಷ್ಯ ತಾನು ಮತ್ತೊಬ್ಬರಿಂದ ಸಹಾಯ, ಉಪಕಾರ ಪಡೆದವನು ಎಂಬುದನ್ನು ನೆನೆಯಬಾರದು ಹಾಗೆಯೇ ಮರೆಯಲೂಬಾರದು. ಕೃತಜ್ಞತೆಯು ಋಣವಿದ್ದಂತೆ. ಮಾನವರಾದ ನಾವುಗಳು ತನ್ನ ಮೇಲಿರುವ ಕೃತಜ್ಞತಾ ಭಾರವನ್ನು ಕಡಿಮೆ ಮಾಡಿಕೊಳ್ಳಬೇಕು. ಅದನ್ನು ಎಂದಿಗೂ ಮರೆಯಬಾರದು. ಮರೆತವನು ಮನುಷ್ಯನಾಗುವುದಿಲ್ಲ. ಕೃತಜ್ಞತೆ ಇಲ್ಲದಿರುವವನಲ್ಲಿ ಯಾವ ಸದ್ಗುಣಗಳೂ ಇರುವುದು ಸಾಧ್ಯವಿಲ್ಲ ಎನ್ನುತ್ತಾರೆ. ಅದು ನಿಜವಾದ ಮಾತು. ಏಕೆಂದರೆ ಮನುಷ್ಯನ ಬೆಳವಣಿಗೆ ಏಕುಖವಾಗಿರದೇ ಬಹುಮುಖವಾಗಿರುತ್ತದೆ. ಅದರಲ್ಲಿ ಒಬ್ಬರಲ್ಲ ಒಬ್ಬರಿಂದ ಒಂದಲ್ಲ ಒಂದು ಸಹಾಯವನ್ನು ವ್ಯಕ್ತಿ ಪಡೆದೆ ಇರುತ್ತಾನೆ. ಅದನ್ನು ಮರೆಯುವುದೆಂದರೆ ಮನುಷ್ಯ ತನ್ನ ವ್ಯಕ್ತಿತ್ವವನ್ನೇ ಕಳೆದುಕೊಂಡಂತೆಯೇ ಆಗುತ್ತದೆ. ಆದ್ದರಿಂದ ಕೃತಘ್ನನಾಗದೆ ಕೃತಜ್ಞನಾಗಿರುವುದು ಒಳಿತು.

**ಸನ್ನಿಗುಣ:** ಸನ್ನಿ ಗುಣವನ್ನು ಸಿನಿಕ್ ಗುಣ ಎಂದು ಗುರುತಿಸುತ್ತಾರೆ. ಈ ಸ್ವಭಾವದ ಮನುಷ್ಯರಿಗೆ ಒಳ್ಳೆಯದೆಂಬುದು ಏನು ಕಾಣುವುದಿಲ್ಲ. "ಇಂಥ ಸನ್ನಿಗುಣ ಹೊಂದಿರುವ ವ್ಯಕ್ತಿಯು ರಣಹದ್ದಿನಂತಿರುತ್ತಾನೆ. ಇಂಥ ಗುಣ ವಿರುವ ವ್ಯಕ್ತಿಯು ಜಗತ್ತಿನಲ್ಲಿ ಯಾವುದನ್ನು ನಂಬುವುದೂ ಇಲ್ಲ; ಮೆಚ್ಚುವುದೂ ಇಲ್ಲ. ಇಂಥವರ ಭಾವ ಮತ್ತು ಬುದ್ಧಿಗಳು ಭ್ರಷ್ಟಾಚಾರದಿಂದ ಕೂಡಿರುತ್ತವೆ. ಒಳ್ಳೆಯದೆಲ್ಲವನ್ನೂ ಇವರು ಭ್ರಮೆ ಎಂದೇ ಭಾವಿಸುತ್ತಾರೆ. ಇವನು ಬೌದ್ಧಿಕವಾಗಿ ಮಾನಸಿಕವಾಗಿ ಹೆಳವನಾಗಿರುತ್ತಾನೆ. ತಾನು ಅಂಕುಡೊಂಕು ಇರುವುದರಿಂದ ಎಲ್ಲವೂ ಅಂಕುಡೊಂಕು ಎಂದು ಭಾವಿಸುತ್ತಾನೆ. ಜೀವನದಲ್ಲಿ ನಕಾರಾತ್ಮಕವಾದುದೊಂದು ಆಗಿರುತ್ತದೆ"[೩] ಎನ್ನುತ್ತಾರೆ. 'ಇಂಥ ಸಿನುಕುತನ ಇರುವ ಜನರು ನಂಬಬಾರದದ್ದನ್ನೆಲ್ಲ ನಂಬುತ್ತಾರೆ. ನಂಬುವಂಥದ್ದರ ಬಗ್ಗೆಯೂ ಅವಿಶ್ವಾಸವನ್ನು ಪಡುವಂತವರಾಗಿರುತ್ತಾರೆ. ತಾನು ಕಟ್ಟಿಕೊಂಡ ಭ್ರಮಾಲೋಕದಲ್ಲಿಯೇ ಗಟ್ಟಿಯಾಗಿ ಅಂಟಿಕೊಂಡಿರುತ್ತಾರೆ. ಹೀಗಾಗಿ ಅವರು ತಮ್ಮ ಅಪನಂಬಿಕೆಯ ಭ್ರಮೆಯನ್ನೇ ಆನಂದ ಭಾವನೆ ಎಂದು ನಂಬುತ್ತಾರೆ.'[೪] ಎಂದಿದ್ದಾರೆ. ಇದೊಂದು ರೀತಿಯ ಮಾನಸಿಕ ಕಾಯಿಲೆಯಿದ್ದಂತೆ ಈ ಗುಣವಿರುವ ಮನುಷ್ಯ ಎಂದಿಗೂ ನೆಮ್ಮದಿಯಾಗಿ ಜೀವನ ಸಾಗಿಸಲು ಸಾಧ್ಯವಿಲ್ಲ. ಸಣ್ಣತನದ ಈ ಗುಣದಿಂದ ಯಾವ ದೊಡ್ಡ ಕೆಲಸಗಳನ್ನು ಮಾಡಲು ಸಾಧ್ಯವಾಗುವುದಿಲ್ಲ. "ಸಿನಿಕತನ ಹೊಂದಿದವನು ಹಾಲಿನಲ್ಲಿ ಹುಳಿ ಹಿಂಡುವ ಪ್ರವೃತ್ತಿಯನ್ನು ಹೊಂದಿರುತ್ತಾನೆ. ಅವನಲ್ಲಿ ಮಲತಾಯಿ ಧೋರಣೆಯಿರುತ್ತದೆ. ಆತನಿಗೆ ಯಾರು ಸರಿ ಇರಬಾರದು. ಯಾರೂ ಸರಿ ಇರಬಾರದು. ಅವನು ನರಕವನ್ನು ಸ್ವರ್ಗ ಮಾಡಬೇಕೆನ್ನುವುದಿಲ್ಲ. ಆದರೆ ಸ್ವರ್ಗವನ್ನು ನರಕ ಮಾಡಬೇಕೆನ್ನುತ್ತಾನೆ"[೫] ಎನ್ನುತ್ತಾರೆ. ಇಂಥವರು ತಾವು ಅಸಂತೋಷಿಗಳಾಗಿದ್ದುಕೊಂಡು ವಿಲಕ್ಷಣವಾದ ಗುಣವನ್ನು ಹೊಂದಿರುತ್ತಾರೆ. ಇದರಿಂದಾಗಿಯೇ ಯಾವುದನ್ನು ಮೆಚ್ಚದ, ನೋಡದ, ಹುಳುಕು ಹುಡುಕುವ ಮನೋಧರ್ಮವನ್ನು ಬೆಳೆಸಿಕೊಂಡಿರುತ್ತಾರೆ. ಆದ್ದರಿಂದ ಮನುಷ್ಯನ ಸ್ವಭಾವಕ್ಕೆ ಇದೊಂದು ಕೆಟ್ಟ ಗುಣವಾಗಿ ಪರಿಣಮಿಸುತ್ತದೆ. ಸಂದೇಹ ಎಂಬುದು ಸಿನಕತನದ ಇನ್ನೊಂದು ಭಾಗವೇ ಆಗಿರುತ್ತದೆ. ಆತ್ಮವಿಶ್ವಾಸ ಇರುವ ಕಡೆಯಲ್ಲಿ ಸಂದೇಹಕ್ಕೆ ಅವಕಾಶವಿರುವುದಿಲ್ಲ. ಹೆಚ್ಚು ಓದಿದವರ ಜನರಲ್ಲಿ ಇಂಥಹ ಸಂದೇಹ ಭಾವವು ಹೆಚ್ಚಾಗಿಯೇ ಇರುತ್ತದೆ. ಹೀಗೆ ಸಂದೇಹ ಪಡುವ ಮನುಷ್ಯರಿಂದ ಏನನ್ನೂ ಸಾಧಿಸಲಾಗುವುದಿಲ್ಲ. ಅಂಥವರು ಹಾಳಾಗುತ್ತಾರೆ. ಆದ್ದರಿಂದ ಸಂಶಯವಾಗಲಿ ಸಂದೇಹವೇ ಆಗಲಿ ಅದು ಆರೋಗ್ಯಕರವಾಗಿದ್ದರೆ ಒಳ್ಳೆಯದು.

**ಅಂಜಿಕೆ:** ಅಂಜುಬುರುಕುತನ ಮನುಷ್ಯನ ದೌರ್ಬಲ್ಯಗಳಲ್ಲಿ ಒಂದು. ಈ ರೀತಿ ಅಂಜುಬುರುಕುತನ ಇರುವ ವ್ಯಕ್ತಿಗಳಿಂದ ಜೀವನದಲ್ಲಿ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಹಾಗೇಯೆ ಇವರಿಂದ ಸಮಾಜಕ್ಕೆ ಯಾವುದೇ ಉಪಯೋಗವೂ ಇರುವುದಿಲ್ಲ. ಈ ಸ್ವಭಾವವಿರುವ ವ್ಯಕ್ತಿಗಳಿಗೆ ಎಲ್ಲದರ ಬಗೆಗೆ ಭಯವೇ ಆವರಿಸಿಕೊಂಡಿರುತ್ತದೆ. ಅದರಂತೆ ತಮ್ಮ ಕುತಿತ್ಸಕ ಬುದ್ಧಿಯಿಂದ ಸಮಾಜಕ್ಕೆ ಸುಳ್ಳು ಭಾವನೆಗಳನ್ನು ಬಿತ್ತುತ್ತಾರೆ. ಒಂದು ವೇಳೆ ಸ್ವರ್ಗಕ್ಕೂ ಒಯ್ದರೂ ಅಲ್ಲಿಯೇ ಒಂದು ನರಕವನ್ನು ಸೃಷ್ಟಿಸುತ್ತಾರೆ. ತಾವು ಅಂಜುವುದಲ್ಲದೆ ಮತ್ತೊಬ್ಬರನ್ನು ಅಂಜಿಸಿ ಪಾತಾಳಕ್ಕೆ ಬೀಳುತ್ತಾರೆ[೬]. ಆದ್ದರಿಂದ ಮಾನವನು ಈ ಅಂಜಗುಳಿತನದಿಂದ ದೂರವಿರಬೇಕು. ಧೈರ್ಯಂ ಸರ್ವತ್ರ ಸಾಧನಂ ಎಂಬುದನ್ನು ಅರಿತು ಬಾಳಬೇಕಾಗುತ್ತದೆ. ಇದರಿಂದ ತಾವು ಬದುಕುವುದಲ್ಲದೆ; ಮತ್ತೊಬ್ಬರನ್ನು ಬದುಕಿಸಲು ಸಾಧ್ಯವಾಗುತ್ತದೆ.

**ಸಂಶಯ:** ಸಂಶಯ ಎಂಬುದು ವ್ಯಕ್ತಿಯಲ್ಲಿರುವ ಒಂದು ಖಾಯಿಲೆಯಿದ್ದಂತೆ. ಈ ಗುಣಸ್ವಭಾವವುಳ್ಳ ವ್ಯಕ್ತಿಯು ತನ್ನತನವನ್ನು ಹಾಳುಮಾಡಿಕೊಳ್ಳುವುದಲ್ಲದೆ ಬೇರೆಯವರ ತನವನ್ನು ಹಾಳುಮಾಡುತ್ತಾನೆ. ವ್ಯಕ್ತಿಯಲ್ಲಿ ಇಂಥ ಸಂಶಯದ ಭಾವನೆಗಳು ಮೂಡಬಾರದು. ಆದ್ದರಿಂದ ಪುಟ್ಟಪ್ಪನವರು ಹೇಳುವಂತೆ; 'ಮನುಷ್ಯನಿಗೆ ಮಹಾವೈರಿಯೊಬ್ಬನಿದ್ದರೆ ಅವಿಶ್ವಾಸವೇ ಆ ಮಹಾವೈರಿ'[೭] ಎನ್ನುತ್ತಾರೆ. ಆದ್ದರಿಂದ ವ್ಯಕ್ತಿಯು ಮೊದಲು ತನ್ನಲ್ಲಿ ವಿಶ್ವಾಸವನ್ನು ಇಡಬೇಕಾಗುತ್ತದೆ. ಇದರಿಂದ ತಾನು ಮಾಡುವ

ಕೆಲಸದಲ್ಲಿ ವಿಶ್ವಾಸ ಮೂಡುತ್ತದೆ. ಮೊದಲೇ ಸೋಲುತ್ತೇನೆ ಎಂಬ ಭಯವನ್ನಿರಿಸಿಕೊಂಡು ಯಾವುದಾದರೂ ಕೆಲಸಕ್ಕೆ ಕೈ ಹಾಕಿದ್ದಾದರೆ ಅದರಿಂದ ಗೆಲವು ಸಾಧಿಸಲು ಸಾಧ್ಯವಾಗುವುದಿಲ್ಲ. ವಿಶ್ವಾಸವು ಗೆಲವಿಗೆ ನಾಂದಿಯಾಗುತ್ತದೆ. ಹಾಗಾಗಿಯೇ ಪುಟ್ಟಪ್ಪನವರು 'ಆತ್ಮವಿಶ್ವಾಸಕ್ಕಿಂತ ಬೇರಾವುದು ಇಲ್ಲ' ಎಂದಿದ್ದಾರೆ.

**ನಿರಾಸೆ:** ನಿರಾಸೆ ಎಂಬುದು ಮಾನವ ದೌರ್ಬಲ್ಯ ಗುಣದಲ್ಲಿ ಒಂದಾಗಿದೆ. ನಿರಾಸೆ ಎಂಬುದಕ್ಕೆ ಕನ್ನಡ ನಿಘಂಟಿನಲ್ಲಿ ಆಸೆಯಿಲ್ಲದಿರುವುದು, ಅನಿಚ್ಚೆ, ಆಶಾಭಂಗ, ಆಸೆಗೇಡು ಎಂದರ್ಥಗಳಿವೆ. ನಿರಾಸೆ ಭಾವವು ಒಮ್ಮೆ ವ್ಯಕ್ತಿಯಲ್ಲಿ ಮೂಡಿದರೆ ಅಂಥ ವ್ಯಕ್ತಿಯಿಂದ ಒಳ್ಳೆಯದನ್ನು ನಿರೀಕ್ಷಿಸಲಾಗುತ್ತದೆ. ನಿರಾಸೆ ಆವರಿಸಿದರೆ ನಿರುತ್ಸಾಹ ನಿರ್ವಿಣ್ಣತೆಗಳು ಆವತರಿಸಿಕೊಳ್ಳುತ್ತವೆ. ಇವರಿಂದ ಅವನ ಮನಸ್ಸಿನ ವ್ಯವಧಾನವೇ ಕಳೆದುಕೊಳ್ಳುತ್ತವೆ. ಸಾಮರ್ಥ್ಯಗಳು ಅಡಗಿ ಹೋಗುತ್ತದೆ. ಆದ್ದರಿಂದ ವ್ಯಕ್ತಿಯ ತನ್ನಲ್ಲಿ ಮೂಡುವ ನಿರಾಶೆಯ ಭಾವಗಳಿಂದ ದೂರ ಉಳಿಯಬೇಕು. "ಶ್ರದ್ಧೆ ಹಾಗೂ ನಂಬುಗೆಗಳನ್ನು ಬೆಳೆಸಿಕೊಂಡು ಹೋಗುವ ಮನುಷ್ಯನ ಜೀವನದಲ್ಲಿ ನಿರಾಸೆ ಎನ್ನುವುದೇ ಇಲ್ಲ. ಗೆಲ್ಲುವ ನಿರ್ಧಾರವನ್ನು ಮನಸ್ಸಿನಲ್ಲಿ ತೊಟ್ಟು ಮುಂದೊತ್ತಿಕೊಂಡು ಹೋಗುವ ಮನುಷ್ಯನ ಜೀವನದಲ್ಲಿ ನಿರಾಸೆಗೆ ಸ್ಥಳವೇ ಇರಲಾರದು"[೮] ಎನ್ನುತ್ತಾರೆ. ಆದರೆ ನಿರಾಸೆ ಕೆಟ್ಟದ್ದೂ ಅಲ್ಲ ಎಂಬುದನ್ನು ಹೇಳುತ್ತಾರೆ.

**ಸ್ವಾರ್ಥ:** ಸ್ವಾರ್ಥ ಎನ್ನುವುದು ವ್ಯಕ್ತಿ ವೈಯಕ್ತಿಕಕ್ಕೆ ಸಂಬಂಧಿಸಿದ್ದಾಗಿದೆ. ಆದ್ದರಿಂದ ವ್ಯಕ್ತಿ ಎಂದಿಗೂ ಸ್ವಾರ್ಥಭಾವದಿಂದ ದೂರವಿರಬೇಕು. ಸ್ವಾರ್ಥರಹಿತ ವ್ಯಕ್ತಿಯು ಒಳ್ಳೆಯದನ್ನು ಮಾಡುವುದನ್ನು ಸಾಧ್ಯವಾಗುತ್ತದೆ. ಸ್ವಾರ್ಥವುಳ್ಳ ಮನುಷ್ಯನಿಂದ ಅದು ಸಾಧ್ಯವಿಲ್ಲ. ಜಗತ್ತಿನಲ್ಲಿ ಆಗಿರುವ ಆಗುತ್ತಿರುವ ಅಸಾಯಕ ಮೂಲಗಳಿಗೆ ಸ್ವಾರ್ಥವೇ ಕಾರಣವಾಗಿರುತ್ತದೆ ಎಂಬುದು ಪಾಪು ಅವರ ಅಭಿಪ್ರಾಯ ಆದ್ದರಿಂದ "ಸ್ವಂತದ ಹಿತಾಶಕ್ತಿಗಳನ್ನೆ ನೋಡುಕೊಳ್ಳುವ ಮನುಷ್ಯನು ಜಗತ್ತಿನ ಉಪಕಾರಿ ಎನಿಸುವುದಿಲ್ಲ. ಅಪಕಾರಿ ಎನಿಸುತ್ತಾನೆ"[೯] ಎಂದಿದ್ದಾರೆ.

**ಅಹಂಕಾರ:** ಅಹಂ ಭಾವವೇ ಅಹಂಕಾರವೆನಿಸಿಕೊಳ್ಳುತ್ತದೆ. ಅಹಂಕಾರ ಎಂಬುದಕ್ಕೆ ಗರ್ವಿಷ್ಠ, ತಾನೆ ಹೆಚ್ಚೆಂಬ ಭಾವವುಳ್ಳವನು ಎಂಬ ಅರ್ಥಗಳಿರುವುದು ತಿಳಿದುಬರುತ್ತದೆ. ಆದರೆ ಪುಟ್ಟಪ್ಪನವರು ತಾನೇ ಹೆಚ್ಚೆಂಬ ಭಾವವುಳ್ಳ ವ್ಯಕ್ತಿಗಳನ್ನು ಕುರಿತು ಮಾತನಾಡುತ್ತಾರೆ. ಇಲ್ಲಿ ಅಹಂಕಾರವು ಎಲ್ಲ ಅನಿಷ್ಟಗಳಿಗೂ ಕಾರಣವಾಗುತ್ತದೆ. ಅದರಲ್ಲೂ ಅಧಿಕಾರದ ಅಹಂಕಾರ ತುಂಬಿಕೊಂಡವನು ಜನರಿಂದ ದೂರವಾಗುತ್ತಾನೆ. ತನ್ನ ತನ್ನ ತಪ್ಪುಗಳನ್ನು ಮುಚ್ಚಿಕೊಳ್ಳಬೇಕೆನ್ನುವ ಮನುಷ್ಯನು, ತನ್ನ ಅಹಂಕಾರದ ಹೊದಿಕೆ ಹೊತ್ತುಕೊಂಡಿರುತ್ತಾನೆ. ಇಂಥ ಗುಣವುಳ್ಳ ವ್ಯಕ್ತಿಯು ತನ್ನ ತಂದೆ ತಾಯಿಗಳನ್ನು ಧಿಕ್ಕರಿಸಿ ನಡೆಯುತ್ತಾನೆ. ತನ್ನನ್ನು ತಾನು ತೋರಿಸಿಕೊಳ್ಳುವ ಕಡೆಗೆ ಹೆಚ್ಚಿನ ಗಮನ ಹರಿಸುತ್ತಾನೆ. ಹಾಗಾಗಿಯೇ ಪಾಟೀಲ ಪುಟ್ಟಪ್ಪನವರು ಅಹಂಕಾರವನ್ನು ಗೂನು ಬೆನ್ನನ್ನು ಜೀವನದಲ್ಲಿ ಸರಿಪಡಿಸಲಾಗದು. ಇಂಥವರಿಗೆ ಬೇರಾರು ಶಿಕ್ಷೆ ನೀಡುವುದು ಬೇಕಾಗಿಲ್ಲ. ಅವನ ಅಹಂಕಾರವೇ ಅವನನ್ನು ದಂಡಿಸುತ್ತದೆ[೧೦] ಎನ್ನುತ್ತಾರೆ. ಹಾಗಾಗಿ ಪಾಪು ಅವರ ಪ್ರಕಾರ ಅಹಂಕಾರವು ಮಾನವರಲ್ಲಿ ಅತಿಯಾಗಬಾರದು. ಅಧಿಕಾರ ಬಂದಾಗಲಾಗಲಿ; ಇಲ್ಲದಿರುವಾಗಗಾಲಿ ಒಂದೇ ರೀತಿಯ ಮನಸ್ತಿತಿಗಳು ಇರಬೇಕು ಎಂಬುದು ಅವರ ಅಭಿಪ್ರಾಯವಾದಂತಿದೆ.

ಅಹಂಕಾರದ ಪರ್ಯಾಯ ರೂಪವೇ ಜಂಭ. ಮನುಷ್ಯನಾದವನು ಎಂದಿಗೂ ತನ್ನನ್ನು ಪ್ರಶಂಸಿಕೊಳ್ಳಬಾರದು. ಒಂದು ವೇಳೆ ಪ್ರಶಂಸಿಕೊಂಡರೆ ಆ ವ್ಯಕ್ತಿಯಲ್ಲಿ ಜಂಭವಿದೆ ಎಂದೇ ಅರ್ಥ. ಈ "ಜಂಭವು ಸಾವಿರ ನಾಲಿಗೆಯ ಸರ್ಪವಿದ್ದಂತೆ. ಇದರಿಂದ ಉದ್ಭವವಾಗು ನಾನು ಎಂಬ ಭಾವವು ಶತ್ರುಗಳನ್ನು ತಂದುಕೊಡುತ್ತದೆ ಅಲ್ಲದೆ; ಮಿತ್ರರನ್ನಲ್ಲ"[೧೧]. ಇದಕ್ಕೆ ಕಾರಣ ಜಂಭವುಳ್ಳ ಮನುಷ್ಯ ಯಾವಾಗಲೂ ತನ್ನನ್ನೇ ಹೋಗಳಿಕೊಳ್ಳುತ್ತಾನೆ ಇದರಿಂದ ಶತ್ರುಗಳ ಪ್ರಮಾಣವು ಅಧಿಕವಾಗುವ ಸಂಭವವಿರುತ್ತದೆ. ಮತ್ತೆ ಕೆಲವು ಸಲ ಈ ಜಂಭದಿಂದಾಗಿ ದೊಡ್ಡವರನ್ನು ಏಕವಚನ ಬಳಸಿ ಮಾತನಾಡಿಸುವಂತೆ ಮಾಡುತ್ತದೆ. ಇಂಥವರನ್ನು ಜನರು ಅಸಂಸ್ಕೃತನಾದ ವ್ಯಕ್ತಿ ಎಂಬ ತೀರ್ಮಾನಕ್ಕೆ ಬರಲು ಕಾರಣವಾಗುತ್ತದೆ. ಇದರಿಂದಾಗಿ ಒಳ್ಳೆಯ ಸ್ನೇಹಿತರನ್ನೂ ಸಹಿತ ದೂರವಿಡುತ್ತದೆ. ಆದ್ದರಿಂದ ಮನುಷ್ಯನು ಮೊದಲು ಜಂಭವನ್ನು ದೂರವಿಡಬೇಕಾಗುತ್ತದೆ. ಆಗ ಮಾತ್ರ ಅವನು ದೊಡ್ಡವನೆನಿಸಿಕೊಳ್ಳಲು ಸಾಧ್ಯವಾಗುತ್ತದೆ.

**ದ್ವೇಷ:** ದ್ವೇಷ ಎಂದರೆ ಹಗೆತನ, ವೈರತ್ವ, ಕೋಪ, ಕ್ರೋಧ ಎಂಬ ಅರ್ಥಗಳನ್ನು ಕನ್ನಡ ನಿಘಂಟಿನಲ್ಲಿ ನೀಡಲಾಗಿದೆ. ಪುಟ್ಟಪ್ಪನವರು ಹೇಳುವಂತೆ ಇಲ್ಲಿ ದ್ವೇಷ ಎಂಬುದು ವ್ಯಕ್ತಿಯು ಇನ್ನೊಬ್ಬರ ಮೇಲೆ ತೋರುವ ಕೋಪವೇ ಆಗಿದೆ. ಮಾನವರಲ್ಲಿ ಸಣ್ಣತನವಿರುವಲ್ಲಿ ದ್ವೇಷವಿರುತ್ತದೆ. ದ್ವೇಷವು ಸಣ್ಣ ಮನಸ್ಸು ಮಾಡುವ ಬಹುದೊಡ್ಡ ಪಾಪವಾಗಿದೆ. ಯಾವ ಮನುಷ್ಯನು ದ್ವೇಷವನ್ನು ಹೃದಯದಲ್ಲಿ ತುಂಬಿಕೊಂಡಿರುತ್ತಾನೆಯೋ ಅವನಲ್ಲಿ ವಿಧೇಯಕವನ್ನು ಕಾಣಲು ಸಾಧ್ಯವಾಗುವುದಿಲ್ಲ. ದ್ವೇಷದ ಮನೋಭಾವ ಇರುವ ಕಡೆ ಪ್ರೀತಿಗೆ ಸ್ಥಳವೇ ಇರುವುದಿಲ್ಲ. ಪ್ರೀತಿಸುವ ಸಾಮರ್ಥ್ಯವನ್ನೇ ಕಳೆದುಕೊಂಡಿರುತ್ತಾನೆ. ದ್ವೇಷವೂ ಅತಿಯಾದರೆ ಅದು ಬೇರೆಯವರನ್ನು ಸುಡುವುದಕ್ಕಿಂತ ಹೆಚ್ಚಾಗಿ ನಮ್ಮನ್ನೇ ಸುಡುತ್ತದೆ[೧೨]. ಹಾಗಾಗಿ ವ್ಯಕ್ತಿಗಳು ದ್ವೇಷ ಭಾವದಿಂದ ದೂರ ಉಳಿಯಬೇಕಾಗುತ್ತದೆ.

**ಮುಖವಾಡ:** ಮುಖವಾಡ ಎಂಬುದಕ್ಕೆ ಕನ್ನಡ ನಿಘಂಟಿನಲ್ಲಿ 'ಮುಖಭಾವ', 'ಮುಖಕ್ಕೆ ಹಾಕಿಕೊಳ್ಳುವ ಬೇರೆ ವ್ಯಕ್ತಿ ಪ್ರಾಣಿ ಇತ್ಯಾದಿಗಳ ಮುಖಾಕೃತಿ', 'ಮುಖಮುದ್ರೆ', 'ಸೋಗು', 'ನಟನೆ' ಎಂಬ ವಿಭಿನ್ನ ಅರ್ಥಗಳಿವೆ. ಆದರೆ ಪಾಟಟೀಲ ಪುಟ್ಟಪ್ಪನವರು ಇಲ್ಲಿ ಮುಖವಾಡ ಎಂಬ ಪದವನ್ನು 'ಸೋಗು', 'ನಟನೆ', 'ವೇಷ ಮರೆಮಾಚುವುದು' ಎಂಬ ಅರ್ಥದಲ್ಲಿ ಬಳಸಿಕೊಂಡಿದ್ದಾರೆ. ವ್ಯಕ್ತಿಯು ತನ್ನ ಜೀವನದಲ್ಲಿ ನಿಜವಾದ ವೇಷವನ್ನು ತೋರಿಸಿದೆ ಬೇರೆಯವರಿಗೊಸ್ಕರ ಮುಖವಾಡದ ಬದುಕನ್ನು ಸಾಗಿಸುತ್ತಾನೆ. ಇದು ಒಳ್ಳೆಯದಲ್ಲ ಎಂಬುದು ಪಾಪು ಅವರ ಅಭಿಮತ. ಇಂಥ ಗುಣದಿಂದಾಗಿ ನಾವು ಮೋಸಹೋಗುವುದಲ್ಲದೆ, ಬೇರೆಯವರನ್ನು ಮೋಸಗೊಳಿಸುತ್ತೇವೆ. ಇದು ಅತಿಯಾದರೆ ಕೊನೆಗೆ ನಾವು ಯಾರೆಂಬುದನ್ನೆ ಮರೆಯಬೇಕಾಗುತ್ತದೆ. ಇದು ವ್ಯಕ್ತಿಯು ತನ್ನನ್ನು ಮರೆಮಾಚಿಕೊಳ್ಳಲು ಪಡುವ ಪ್ರಯತ್ನವೇ ಆಗಿರುತ್ತದೆ[೧೩]. ಆದ್ದರಿಂದ ಇಂಥ ಗುಣಗಳಿಂದ ನಾವು ದೂರವಿರುವುದು ಮುಖ್ಯ ಎಂಬುದನ್ನು ಅವರು ಇಲ್ಲಿ ಒತ್ತಿ ಹೇಳುತ್ತಾರೆ.

**ಅಜ್ಞಾನ:** ಅಜ್ಞಾನ ಎಂಬುದ ಅವಿದ್ಯೆ, ಅಕ್ಷರದ ಅರಿವಿಲ್ಲದಿರುವಿಕೆಯನ್ನು ಸೂಚಿಸುತ್ತದೆ. ವ್ಯಕ್ತಿಯ ಜೀವನದಲ್ಲಿರುವ ಅಜ್ಞಾನವು ಕತ್ತಲೆಯಂತೆ ಗೋಚರಿಸುತ್ತದೆ. ಅದಕ್ಕಾಗಿ ಶೇಕ್ಸ್ಪಿಯರ್, ಬಸವೇಶ್ವರ, ಅಲ್ಲಮಪ್ರಭು ಮೊದಲಾದ ದಾರ್ಶನಿಕರು ಅಜ್ಞಾನವನ್ನು ಹೊಡೆದೊಡಿಸುವ ಪ್ರಯತ್ನವನ್ನು ಮಾಡಿದರು. ವ್ಯಕ್ತಿಯ ಅಭಿವೃದ್ದಿಯಲ್ಲಿ ಜ್ಞಾನ ಮುಖ್ಯ ಎಂಬುದನ್ನು ಪುಟ್ಟಪ್ಪನವರು ಹೇಳುತ್ತಾರೆ. ಪುಟ್ಟಪ್ಪನವರು ಹೇಳುವ ಪ್ರಕಾರ ಅಲ್ಪಜ್ಞಾನಕ್ಕಿಂತ

ಹೆಚ್ಚಿನ ಅಜ್ಞಾನವು ಗಂಡಾಂತರಕಾರಿಯಾದುದು. ವ್ಯಕ್ತಿಯು ಜ್ಞಾನ ಸಂಪಾದನೆಯ ಸಮಯದಲ್ಲಿ ಯಾವುದೆ ಹಿಂಜರಿಕೆಯನ್ನು ಮಾಡಬಾರದು. ಅದನ್ನು ತಿಳಿದುಕೊಳ್ಳುವುದರತ್ತ ಸಾಗಬೇಕು. “ಅಜ್ಞಾನವು ನಮ್ಮ ಸಮಸ್ಯೆಗಳನ್ನು ಹೆಚ್ಚಿಸುವುದಲ್ಲದೆ, ಅವುಗಳನ್ನು ಕಡಿಮೆ ಮಾಡುವುದಿಲ್ಲ. ಅಜ್ಞಾನ ಇರಿಸಿಕೊಂಡಿರುವ ಮನುಷ್ಯನು ತನ್ನನ್ನು ತಾನೇ ಕಟ್ಟಿಕೊಳ್ಳುತ್ತಾನೆ”[೧೪] ಎನ್ನುತ್ತಾರೆ. ಅಲ್ಲದೆ “ಅಜ್ಞಾನ ಇರುವಲ್ಲಿ ನಿಜವಾದ ಸ್ವಾತಂತ್ರ್ಯವೇ ಇರುವುದಿಲ್ಲ. ತಮ್ಮೆದುರು ಬೇರೆ ಪರ್ಯಾಯಗಳೇನಿವೆಯೆನ್ನುವುದನ್ನು ಅವರು ತಿಳಿದುಕೊಳ್ಳಲಾರರು. ಬೇರೆ ಪರ್ಯಾಯ ಇದೆ ಎನ್ನುವುದನ್ನು ಊಹಿಸಿಕೊಳ್ಳುವುದಕ್ಕೆ ಕೂಡ ಅವರು ಅಸಮರ್ಥರಾಗಿರುತ್ತಾರೆ”[೧೫]. ಅವರ ಈ ಮಾತಿನಲ್ಲಿ ಹುರುಳಿದೆ. ಆದರೆ ಇಂದಿನ ಸಮಾಜದಲ್ಲಿ ಅಜ್ಞಾನಿಗಳಿಗಿಂತ ಜ್ಞಾನವುಳ್ಳ ಜನರಿಂದಲೆ ಮೋಸ ವಂಚನೆ, ಸಮಸ್ಯೆಗಳ ಸೃಷ್ಟಿ ಮೊದಲಾದವುಗಳನ್ನು ನೋಡಿದರೆ, ಅಜ್ಞಾನಿಗಳು ಮಾಡಲಾಗದಂತ ಕೆಲಸ ಕಾರ್ಯಗಳು ಜರುಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ.

**ಅಪ್ರಾಮಾಣಿಕತೆ:** ಪ್ರಾಮಾಣಿಕತೆಗೆ ವಿರುದ್ಧವಾದ ಗುಣ ಸ್ವಭಾವವುಳ್ಳವನು ಎಂದರ್ಥ. ಆದರೆ ಕನ್ನಡ ನಿಘಂಟಿನಲ್ಲಿ ಮೋಸಗಾರಿಕೆ, ಪ್ರಾಮಾಣಿಕತೆ ಇಲ್ಲದಿರುವುದು ಎಂಬ ಅರ್ಥಗಳನ್ನು ನೀಡಲಾಗಿದೆ. ಪುಟ್ಟಪ್ಪನವರು ಮೋಸಗೊಳಿಸುವ ಸ್ವಭಾವವಿರುವವರನ್ನು ಅಪ್ರಾಮಾಣಿಕರು ಎಂಬುದಾಗಿ ಗುರುತಿಸುತ್ತಾರೆ. ಇವರ ಪ್ರಕಾರ “ಅಪ್ರಾಮಾಣಿಕತೆಗಿಂತ ಅವಹೇಳನಕಾರಿಯಾದುದು ಗಂಡಾಂತರಕಾರಿಯಾದುದು ಯಾವುದು ಇಲ್ಲ”[೧೬] ಎನ್ನುತ್ತಾರೆ. ಅಲ್ಲದೆ ಇಂಥ ಗುಣವಿರುವವರು ತಾವು ಮೋಸಹೋಗುವುದಲ್ಲದೆ ಬೇರೆಯವರನ್ನು ಮೋಸಗೋಳಿಸುತ್ತಾರೆ. ಇವರಲ್ಲಿ ಏಕಮುಖತ್ವವಿರದೆ ಬಹುಮುಖತ್ವ ಇರುತ್ತದೆ. ಕೃತಕ ಹಾಗೂ ನಾಟಕೀಯತೆಯ ಸ್ವಭಾವವನ್ನು ಒಳಗೊಂಡಿರುತ್ತಾರೆ. “ಯಾವ ಮನುಷ್ಯನು ಈ ರೀತಿ ತನ್ನನ್ನು ತಾನೆ ಮೋಸಗೊಳಿಸಿಕೊಳ್ಳುವನೋ, ಅದು ಜಗತ್ತಿನಲ್ಲಿ ನಡೆಯುವ ಎಲ್ಲ ಮೋಸ ವಂಚನೆಗಳಿಗಿಂತಲೂ ಅತ್ಯಂತ ಹೆಚ್ಚು ನಿಕೃಷ್ಟವಾದುದು. ತನ್ನನ್ನು ತಾನು ಮೋಸಪಡಿಸಿಕೊಳ್ಳುವ ಮನುಷ್ಯನು ಯಾರನ್ನು ಬೇಕಾದರೂ ಮೋಸಪಡಿಸುತ್ತಾನೆ. ತನ್ನ ಬಗೆಗೆ ತಾನು ಅಪ್ರಾಮಾಣಿಕನಾದ ಮನುಷ್ಯನನ್ನು ಎಲ್ಲ ಪಾಪಗಳೂ ಹಿಂಬಾಲಿಸಿ ಹೋಗುತ್ತವೆ”[೧೭] ಎಂದಿದ್ದಾರೆ. ಆದ್ದರಿಂದ ವ್ಯಕ್ತಿಯೂ ತನಗೊಂದು ಮುಖ, ಸಮಾಜಕ್ಕೊಂದು ಮುಖ ಎಂಬ ಇಬ್ಬಗೆಯ ಮನೋಭಾವದಿಂದ ಬದುಕಬಾರದು. ಅವರ ಮಾತಿನಲ್ಲಿ ಅರ್ಥವಿದೆ. ಏಕೆಂದರೆ ಮಾನವನು ಸಹಜವಾಗಿ ಪರರನ್ನು ಮೆಚ್ಚಿಸುವುದಕ್ಕಾಗಿಯೇ ಇಬ್ಬಗೆಯ ಮನೋಭಾವವನ್ನು ರೂಡಿಸಿಕೊಂಡಿರುತ್ತಾನೆ. ತಾನು ಇರುಂತೆ ಇರದೆ ಅವಾಸ್ತಿವಿಕವಾದ ಬದಕಿನಲ್ಲಿ ಸಾಗುತ್ತಾನೆ. ಇದು ಸಹಿತ ಅಪ್ರಾಮಾಣಿಕತೆಯ ಒಂದು ಭಾಗವಾಗಿಯೇ ತೋರುತ್ತದೆ.

**ಗೊಣಗುವಿಕೆ:** ಗೊಣಗು ಎಂದರೆ ‘ಅಸ್ಪಷ್ಟವಾಗಿ ಮಾತನಾಡುವಿಕೆ’, ‘ಅಸಮದಾನದಿಂದ ತನ್ನಲ್ಲೆ ಮಾತನಾಡಿಕೊಳ್ಳು’, ‘ವಟುಗುಡು’, ‘ಗೋಣಗಾಡುವಿಕೆ’ ಎಂದು ಕನ್ನಡ ನಿಘಂಟಿನಲ್ಲಿ ಅರ್ಥಗಳಿವೆ. ಪುಟ್ಟಪ್ಪನವರು ಇಲ್ಲಿ ಗೊಣಗು ಎಂಬುದನ್ನು ತನ್ನಲ್ಲೆ ತಾನೇ ಮಾತನಾಡಿಕೊಳ್ಳುವುದು ಎಂದರ್ಥದಲ್ಲಿ ಬಳಸಿಕೊಳ್ಳಲಾಗಿದೆ. ಗೋಣಗುವಿಕೆಯ ಸ್ವಭಾವ ಮಾನವರಲ್ಲಿ ಇದ್ದರೆ ಆಗಬೇಕಾದ ಕೆಲಸವು ಸಹಿತ ಆಗುವುದಿಲ್ಲ. ಇದು ನಮ್ಮಲ್ಲಿರುವ ಆತ್ಮವಿಶ್ವಾಸವನ್ನು ಕುಸಿಯುವಂತೆ ಮಾಡುತ್ತದೆ. ‘ಎಲ್ಲದರಲ್ಲಿಯೂ ಹುಳುಕನ್ನು ಹುಡುಕುವ ಮನುಷ್ಯ ಯಾವುದನ್ನೂ ಸರಿಪಡಿಸುವುದಿಲ್ಲ. ಇಂಥಹ ಸ್ವಭಾವದ ಮನುಷ್ಯನು ತನಗೂ ಒಳ್ಳೆಯದನ್ನು ಮಾಡಿಕೊಳ್ಳುವುದಿಲ್ಲ. ಯಾರೊಬ್ಬರಿಗೂ ಒಳ್ಳೆಯದನ್ನು ಮಾಡುವುದಿಲ್ಲ. ಅವನು ಅವರನ್ನು ಕೂಡ ನಿರುತ್ಸಾಹಿಗಳನ್ನಾಗಿ ಮಾಡುತ್ತಾನೆ’[೧೮] ಎನ್ನುತ್ತಾರೆ. ಹಾಗಾಗಿ ಗೊಣಗುವಿಕೆಯು ಮನುಷ್ಯನ ಅತಿ ದೊಡ್ಡ ಸಮಸ್ಯೆ ಎಂಬುದನ್ನು ಎತ್ತಿ ತೋರಿಸುತ್ತಾರೆ.

**ಕೋಪ:** ಕೋಪ ಎಂಬದಕ್ಕೆ ಸಿಟ್ಟು, ಮುನಿಸು ಎಂಬರ್ಥಗಳಿವೆ. ಪುಟ್ಟಪ್ಪನವರು ಹೇಳುವಂತೆ ಮಾನವನು ತನ್ನ ಭಾವೋದ್ರೆಕವಾದ ಕ್ರಿಯೆಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು ಎನ್ನುತ್ತಾರೆ. ಅಲ್ಲದೆ “ಕೋಪವು ಬೆಂಕಿಯಿದ್ದಂತೆ. ಅದು ಬೇರೆಯವರನ್ನು ಸುಡುವುದಕ್ಕಿಂತ ಹೆಚ್ಚಾಗಿ ಕೋಪಗೊಳ್ಳುವ ವ್ಯಕ್ತಿಯನ್ನೇ ಸುಡುತ್ತದೆ. ಕೋಪಗೊಳ್ಳುವ ಮನುಷ್ಯ ತಾನು ತಾನಾಗಿಯೇ ಉಳಿಯುವುದಿಲ್ಲ. ನ್ಯಾಯವು ಕೋಪಗೊಂಡವನ ಪರವಾಗಿಯೇ ಇದ್ದರೂ, ಲೋಕದ ಕಣ್ಣಿನಲ್ಲಿ ಅವನು ಅಪರಾಧಿಯಾಗಿ ಕಾಣುತ್ತಾನೆ. ಕೋಪವನ್ನು ದಂಡಿಸುವ ಸಾಧನವೆಂದು ಉಪಯೋಗಿಸುವ ಅಮಾನುಷ ಕ್ರೌರ್ಯವನ್ನೆಸುಗುತ್ತದೆ”[೧೯] ಎನ್ನುತ್ತಾರೆ. ಆದ್ದರಿಂದ ಕೋಪವು ಮನುಷ್ಯನ ಕೆಟ್ಟಗುಣಗಳಲ್ಲಿ ಒಂದಾಗಿ ಕಾಣುತ್ತದೆ. ತಿಳಿದವರು ಹೇಳುವಂತೆ ಒಂದು ನಿಮಿಷದ ಸಿಟ್ಟು ಅರವತ್ತು ನಿಮಿಷದ ನೆಮ್ಮದಿಯನ್ನು ಹಾಳುಮಾಡುತ್ತದೆ ಎಂಬ ಮಾತು ನಿಜ. ಕೋಪವನ್ನು ತಡೆದುಕೊಳ್ಳುವ ಸ್ವಭಾವವನ್ನು ಮನುಷ್ಯ ಬಳಸಿಕೊಳ್ಳಬೇಕು.

ಹೀಗೆ ಮನುಷ್ಯರಲ್ಲಿರಬಾರದ ಅವಗುಣಗಳನ್ನು ಸಹಿತ ಪಾಟೀಲ ಪುಟ್ಟಪ್ಪನವರು ಮನೋಜ್ಞವಾಗಿಯೇ ತಿಳಿಸುತ್ತಾರೆ. ಸಹಜವಾಗಿ ಮನುಷ್ಯ ಮನುಷ್ಯನಾಗಿರಬೇಕು ಎಂಬುದೇ ಈ ಎಲ್ಲ ಚಿಂತನೆಗಳ ಹಿಂದಿರುವ ಮರ್ಮವನ್ನು ಅರಿಯಬೇಕಾಗಿದೆ. ಮಾನವನ ಸ್ವಭಾವವು ಕ್ಷಣದಿಮದ ಕ್ಷಣಕ್ಕೆ ಬದಲಾಗುತ್ತಿರುತ್ತದೆ. ಆದಾಗ್ಯೂ ಸಹಿತ ಕೆಟ್ಟಗುಣಗಳು ಆತನನ್ನು ಅಧೋಗತಿಗೆ ತಗೆದುಕೊಂಡು ಹೋಗುತ್ತವೆ. ಆದ್ದರಿಂದ ಒಳ್ಳೆ ಗುಣಲಕ್ಷಣದ ಸ್ವಭಾವನ್ನು ಬೆಳೆಸಿಕೊಳ್ಳುವುದು ಆವಶ್ಯಕವಾಗಿದೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಮಾನವನು ಬದುಕುವುದಕ್ಕಾಗಿ ಅನುಸರಿಸಬೇಕಾದ ಗುಣಸ್ವಭಾವಗಳನ್ನು ‘ಬದುಕುವ ಮಾತು’ ಮತ್ತು ‘ಮಾತು ಮಾಣಿಕ್ಯ’ ಎಂಬ ಎರಡು ಕೃತಿಗಳಲ್ಲಿ ಸ್ಪಷ್ಟವಾಗಿ ತಿಳಿಸುತ್ತಾರೆ. ಆದರೆ ವಿಷಯದ ಪುನರಾವರ್ತನೆಯು ಓದುಗರನ್ನು ಗೊಂದಲಕ್ಕೆ ಇಡುಮಾಡುತ್ತದೆ. ಇಲ್ಲಿನ ಎಲ್ಲಾ ಬರಹಗಳಲ್ಲಿ ಏಕರೂಪತೆಯಿರುವಂತೆ ಕಾಣುತ್ತದೆ. ಉಳಿದಂತೆ ಕೃತಿಯ ಅಂತರ್ಯದಲ್ಲಿ ಮೂಡಿಬಂದ ಚಿಂತನೆಗಳು ವಾಚಕವರ್ಗವನ್ನು ತನ್ನತ್ತ ಸೆಳೆಯುತ್ತವೆ.

**ಅಡಿಟಿಪ್ಪಣಿ**

೧. ಮಾತುಮಾಣಿಕ್ಯಭಾಗ–೨, ಪಾಟೀಲ ಪುಟ್ಟಪ್ಪ, ಪು. ೧೪೪
೨. ಬದುಕುವ ಮಾತು, ಪಾಟೀಲ ಪುಟ್ಟಪ್ಪ, ಪು. ೯೯
೩. ಮಾತುಮಾಣಿಕ್ಯಭಾಗ–೨, ಪಾಟೀಲ ಪುಟ್ಟಪ್ಪ, ಪು. ೩೮
೪. ಮಾತುಮಾಣಿಕ್ಯಭಾಗ–೨, ಪಾಟೀಲ ಪುಟ್ಟಪ್ಪ, ಪು. ೧೧೮
೫. ಬದುಕುವ ಮಾತು, ಪಾಟೀಲ ಪುಟ್ಟಪ್ಪ, ಪು. ೩೩೧
೬. ಮಾತುಮಾಣಿಕ್ಯಭಾಗ–೨, ಪಾಟೀಲ ಪುಟ್ಟಪ್ಪ, ಪು. ೩೯
೭. ಮಾತುಮಾಣಿಕ್ಯಭಾಗ–೨, ಪಾಟೀಲ ಪುಟ್ಟಪ್ಪ, ಪು. ೪೧
೮. ಮಾತುಮಾಣಿಕ್ಯಭಾಗ–೨, ಪಾಟೀಲ ಪುಟ್ಟಪ್ಪ, ಪು.
೯. ಮಾತುಮಾಣಿಕ್ಯಭಾಗ–೨, ಪಾಟೀಲ ಪುಟ್ಟಪ್ಪ, ಪು. ೮೪
೧೦.ಮಾತುಮಾಣಿಕ್ಯಭಾಗ–೨, ಪಾಟೀಲ ಪುಟ್ಟಪ್ಪ, ಪು. ೨೯೧
೧೧. ಬದುಕುವ ಮಾತು, ಪಾಟೀಲ ಪುಟ್ಟಪ್ಪ, ಪು. ೪೦೧
೧೨.ಬದುಕುವ ಮಾತು, ಪಾಟೀಲ ಪುಟ್ಟಪ್ಪ, ಪು. ೬೮

೧೩.ಬದುಕುವ ಮಾತು, ಪಾಟೀಲ ಪುಟ್ಟಪ್ಪ, ಪು. ೯೬
೧೪. ಬದುಕುವ ಮಾತು, ಪಾಟೀಲ ಪುಟ್ಟಪ್ಪ, ಪು. ೧೦೮
೧೫. ಬದುಕುವ ಮಾತು, ಪಾಟೀಲ ಪುಟ್ಟಪ್ಪ, ಪು. ೨೧೩
೧೬.ಬದುಕುವ ಮಾತು, ಪಾಟೀಲ ಪುಟ್ಟಪ್ಪ, ಪು. ೧೩೯
೧೭.ಬದುಕುವ ಮಾತು, ಪಾಟೀಲ ಪುಟ್ಟಪ್ಪ, ಪು. ೨೪೮
೧೮.ಬದುಕುವ ಮಾತು, ಪಾಟೀಲ ಪುಟ್ಟಪ್ಪ, ಪು. ೩೬೦